**ಇಂದು ದಿನಾಂಕ 31.01.2026 ರಂದು ಪಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿಯರ ಪರ ವಕೀಲರಿಂದಃ**

**1.** ನನ್ನ ತಂದೆ ನಮ್ಮ ಪೂರ್ವಿಕರ ಮಾಹಿತಿಯನ್ನು ಹೇಳಿದ್ದಾರೆ. ನನ್ನ ತಂದೆ ಕೊಟ್ಟ ಮಾಹಿತಿಯನ್ನೇ ನಾನು ತಿಳಿಸಿದ್ದೇನೆ. ನಾರಾಯಣಪುರ ತಮ್ಮಣ್ಣನವರನ್ನು ತೋಟದ ಮನೆ ತಮ್ಮಣ್ಣ ಎಂದು ಕರೆಯುತ್ತಿದ್ದರು ಎಂದರೆ ಗೊತ್ತಿಲ್ಲ. ತಮ್ಮಣ್ಣನ ಮಗ ಹನುಮಯ್ಯ ಮಾತ್ರ ನನಗೆ ಗೊತ್ತು. ಹನುಮಯ್ಯನನ್ನು ನಾನು ನೋಡಿದ್ದೇನೆ. ನನಗೆ ಈಗ ಸುಮಾರು 62 ವರ್ಷ. ಹನುಮಯ್ಯನವರು ಯಾವಾಗ ಮೃತರಾದರು ಎಂದು ದಿನಾಂಕ ಗೊತ್ತಿಲ್ಲ. ಹನುಮಯ್ಯನವರು ನಾನು ಸುಮಾರು 10 ವರ್ಷದವನಿದ್ದಾಗ ತೀರಿಕೊಂಡಿರಬಹುದು. ನನ್ನ ಅಕ್ಕನ ಮಗ ಶ್ರೀನಿವಾಸ್ ರವರು ಹನುಮಯ್ಯನವರು ಮೃತರಾದಾಗ ಇದ್ದರೊ ಇಲ್ಲವೊ ಗೊತ್ತಿಲ್ಲ. ಆಗ ಮರಿಯಮ್ಮ ನನ್ನ ತಂಗಿ ಹುಟ್ಟಿದ್ದಳು. ಬೈಯಮ್ಮನವರು ಹುಟ್ಟಿದ್ದರು. ನಿಪಿ-1 ವಂಶವೃಕ್ಷವನ್ನು ನಾವೇ ಹಾಜರು ಮಾಡಿದ್ದೇವೆ ಎಂದರೆ ನಿಜ. ನಿಪಿ-1 ನ್ನು 2005 ರಲ್ಲಿ ಮುನಿಕೆಂಪಯ್ಯನವರು ತಯಾರು ಮಾಡಿಸಿದ್ದಾರೆ ಎಂದರೆ ನಿಜ. ಮುನಿಕೆಂಪಯ್ಯನವರು ಪಟಾಲಪ್ಪನವರ ಮಗ. ಪಟಾಲಪ್ಪನವರ ಮೊದಲನೇ ಹೆಂಡತಿ ಕೃಷ್ಣಮ್ಮ ಮೃತರಾದ ನಂತರ ಲಕ್ಷ್ಮಮ್ಮನನ್ನು ಮದುವೆಯಾಗಿದ್ದರು ಎಂದರೆ ನಿಜ. ಪಾರ್ವತಮ್ಮ ಮತ್ತು ಮಂಜುಳ ಲಕ್ಷ್ಮಮ್ಮನ ಮಕ್ಕಳು ಎಂದರೆ ನಿಜ. ನಾನು ಮತ್ತು ಮುನಿಕೆಂಪಯ್ಯನವರು ಸೇರಿಕೊಂಡು ಲಕ್ಷ್ಮಮ್ಮನವರ ಮಕ್ಕಳಿಗೆ ಭಾಗ ಕೊಡಬಾರದು ಎಂದು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ನಿಪಿ-52 ನ್ನು ತಮ್ಮಣ್ಣಪ್ಪನ ಮಗ ಹನುಮಯ್ಯ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ತಮ್ಮಣ್ಣಪ್ಪನಿಗೆ ಒಬ್ಬರೇ ಹೆಂಡತಿ ಬೈಯಮ್ಮ ಇದ್ದರು ಎಂದರೆ ನಿಜ. ತಮ್ಮಣ್ಣ ಮತ್ತು ಕೆಂಪಮ್ಮ ಎನ್ನುವವರಿಗೆ ಯಾವುದೇ ವೈವಾಹಿಕ ಸಂಬಂಧ ಇರಲಿಲ್ಲ ಎಂದರೆ ಗೊತ್ತಿಲ್ಲ. ನಿಪಿ-52 ರಲ್ಲಿ ಸಾಕ್ಷಿಗಳು ನಾರಾಯಣಪುರ ಗ್ರಾಮದವರು ಅಲ್ಲ ಎಂದರೆ ಸರಿಯಲ್ಲ. ತಮ್ಮಣ್ಣನ ಮಗ ಹನುಮಯ್ಯನವರಿಗೆ ಸಾಕಷ್ಟು ಆಸ್ತಿಗಳು ಇದ್ದವು ಎಂದರೆ ಸರಿಯಲ್ಲ. ನಿಪಿ-52 ನ್ನು ಸೃಷ್ಟಿ ಮಾಡಿಕೊಂಡು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಹನುಮಯ್ಯನವರು ಮೃತರಾದಾಗ ಸುಮಾರು 90-95 ಕ್ಕಿಂತ ಹೆಚ್ಚು ವಯಸ್ಸಾಗಿತ್ತು ಎಂದರೆ ಇರಬಹುದು. ಹನುಮಯ್ಯನವರು ತೀರಿಕೊಂಡ ನಂತರ ಅವರ ಹೆಂಡತಿ ನಂಜಮ್ಮ ತೀರಿಕೊಂಡಿದ್ದಾರೆ ಎಂದರೆ ನಿಜ. ನಂಜಮ್ಮನವರು ತೀರಿಕೊಂಡಾಗ ಸುಮಾರು 90-95 ವಯಸ್ಸು ಎಂದರೆ ನನಗೆ ಗೊತ್ತಿಲ್ಲ. ನಂಜಮ್ಮ ಮೃತರಾದಾಗ ನನಗೆ ಸುಮಾರು 15-16 ವರ್ಷ.

ನಂಜಮ್ಮನವರು ಅವರ ಅಣ್ಣ ಮುನಿಶಾಮಪ್ಪನ ಮನೆಯಲ್ಲಿ ಮೃತರಾದರು ಎಂದರೆ ಇರಬಹುದು. ಮುನಿಶಾಮಪ್ಪನವರು ತರಹುಣಿಸೆಯಲ್ಲಿ ಇದ್ದರು. ನಂಜಮ್ಮನ ಅಂತ್ಯಕ್ರಿಯೆಗಳನ್ನು ತರಹುಣಿಸೆಯಲ್ಲಿ ಮಾಡಿದರು ಎಂದರೆ ಸರಿಯಲ್ಲ. ನಾರಾಯಣಪುರದಲ್ಲಿ ಮಾಡಿದ್ದಾರೆ. ನಂಜಮ್ಮ ಮತ್ತು ಹನುಮಯ್ಯನ ಅಂತ್ಯಕ್ರಿಯೆಗಳನ್ನು ಮುನಿಶಾಮಪ್ಪನವರು ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮಾಡಿದ್ದಾರೆ. ಹನುಮಯ್ಯ ಮತ್ತು ನಂಜಮ್ಮನಿಗೆ ಮಕ್ಕಳು ಇರಲಿಲ್ಲ ಎಂದರೆ ನಿಜ. ಅವರು ಹನುಮಕ್ಕನ ಮಕ್ಕಳನ್ನು ಅವರ ಮಕ್ಕಳಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ವೆಂಕಟಪ್ಪನನ್ನು ಮಾತ್ರ ಮಗನಾಗಿ ನೋಡಿಕೊಳ್ಳುತ್ತಿದ್ದರು. ಹನುಮಯ್ಯ ಮತ್ತು ಹನುಮಕ್ಕನ ಮನೆ ಒಂದು ಮೈಲಿ ದೂರದಲ್ಲಿ ಇದ್ದವು ಎಂದರೆ ಇರಬಹುದು. ಹನುಮಯ್ಯ ಮತ್ತು ಹನುಮಕ್ಕನವರು ಒಂದೇ ಮನೆಯವರ ತರ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-52 ರ ವಿಲ್ ನಕಲಿ ಎಂದರೆ ಸರಿಯಲ್ಲ. ತಮ್ಮಣ್ಣಪ್ಪನಿಗೆ ಸೇರಿದ ಆಸ್ತಿಗಳಲ್ಲಿ ವೆಂಕಟಪ್ಪನಿಗೆ ಮತ್ತು ಪಟಾಲಪ್ಪನಿಗೆ ಸಮನಾಧ ಹಕ್ಕು ಇದೆ ಎಂದರೆ ಸರಿಯಲ್ಲ. ತಮ್ಮಣ್ಣಪ್ಪನನ್ನು ನಾನು ನೋಡಿಲ್ಲ. ಅವರು ಯಾವಾಗ ಮೃತರಾದರು ಎಂದು ಗೊತ್ತಿಲ್ಲ. ತಮ್ಮಣ್ಣಪ್ಪನವರು ನನ್ನ ಅಣ್ಣ ಪ್ರಸನ್ನ ಹುಟ್ಟಿದ 1 1/2 ವರ್ಷಕ್ಕೆ ತೀರಿಕೊಂಡರು ಎಂದರೆ ಸರಿಯಲ್ಲ. ತಮ್ಮಣ್ಣಪ್ಪನವರ ಅಣ್ಣ-ತಮ್ಮಂದಿರು ನನಗೆ ಗೊತ್ತಿಲ್ಲ. ಬೈಯಮ್ಮನನ್ನು ನಾನು ನೋಡಿಲ್ಲ. ನನ್ನ ತಾಯಿಗೆ ಮದುವೆಯಾದಾಗ ಎಷ್ಟು ವರ್ಷ ವಯಸ್ಸು ಎಂದು ಗೊತ್ತಿಲ್ಲ. ನನ್ನ ತಾಯಿಯು ನನಗೆ ಹೇಳಿಲ್ಲ. ನನ್ನ ತಾಯಿಯ ಊರು ಹಿಟ್ಟಕಲ್ಲಪುರ. ನನ್ನ ತಾಯಿಗೆ ಅಣ್ಣ-ತಮ್ಮಂದಿರು ಇದ್ದರು. ಹನುಮಯ್ಯನ ಹೆಂಡತಿ ನಂಜಮ್ಮನ ಊರು ತರಹುಣಿಸೆ. ನಂಜಮ್ಮನ ಊರು ತರಹುಣಿಸೆ ಅಲ್ಲ ನಾಗೇನಹಳ್ಳಿ ಎಂದರೆ ಇರಬಹುದು. ತಮ್ಮಣ್ಣನ ಮಗ ಹನುಮಯ್ಯ ಮತ್ತು ಸೊಸೆ ನಂಜಮ್ಮ ಮುನಿಶಾಮಪ್ಪನ ಮನೆಯಲ್ಲಿ ಇರುತ್ತಿದ್ದರು ಎಂದರೆ ಸರಿಯಲ್ಲ. ನಾರಾಯಣಪುರದಲ್ಲಿ ಇರುತ್ತಿದ್ದರು. ದಾವಾ ಆಸ್ತಿಗಳಲ್ಲಿ ನಮಗೆ ಮತ್ತು ಪ್ರತಿವಾದಿಗಳಿಗೆ ಸಮನಾಧ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ವಿಲ್ ಮಾಡಿದ್ದಾರೆ ಎನ್ನುತ್ತಾರೆ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**